ಕ್ಷೇತ್ರಕ್ಕೆ ಹೊಸದಾಗಿ ಪದಾರ್ಪಣೆ ಗೈದ ಲೇಖಕನನ್ನು, ಅದೂ ಹೆಣ್ಣು ಅಭಿಮಾನಿಯೊಬ್ಬಳು ಊಟಕ್ಕೆ ಸೇರಿ ಮಾತನಾಡೋಣವೇ ಎಂದು ಆಹ್ವಾನವಿತ್ತಾಗ, 'ಇಲ್ಲ' ಎನ್ನುವಂತಹ ಬೌದ್ಧಿಕ ಪರಿಪಕ್ವತೆ ನನಗಿನ್ನೂ ಬೆಳೆದಿರಲಿಲ್ಲ! (ಇಂತ ಪರಿಪಕ್ವತೆ ಕೆಲವೇ ಗಂಡು ಪ್ರಾಣಿಗಳಲ್ಲಿ ಕಂಡು ಬರುತ್ತದೆ. ಸಾಮಾನ್ಯವಾಗಿ, ಅದೂ ಅವರು ಮುದುಕರಾದಾಗ!)

ನನ್ನ ಜೇಬಿನಲ್ಲಿ ಕೇವಲ ಎಂಬತ್ತು ಫ್ರ್ಯಾಂಕುಗಳಿದ್ದವು. ಅದು ನನ್ನ ಆ ತಿಂಗಳ ಖರ್ಚಿಗಷ್ಟೇ ಸಾಕಾಗುವಷ್ಟಿತ್ತು. ಆದರೆ, ನನ್ನ ಸಾಹಿತ್ಯಾಭಿಮಾನಿ ಒಬ್ಬ ಹೆಣ್ಣಾಗಿದ್ದಿದ್ದರಿಂದ, ಸಾಮಾಜಿಕ ರಿವಾಜಿನಂತೆ ಊಟದ ಖರ್ಚು ಭರಿಸುವುದು ಗಂಡಿನ ಜವಾಬ್ದಾರಿಯಾಗಿತ್ತು. ಒಂದು ಮಾಮೂಲಿ ಊಟಕ್ಕೆ ಹದಿನೈದು ಫ್ರ್ಯಾಂಕಿಗಿಂತಲೂ ಹೆಚ್ಚಾಗಲಾರದು ಎಂದು ನಾನು ಅಂದಾಜು ಮಾಡಿದೆ. ಮುಂದಿನ ಎರಡು ವಾರ ಕಾಫಿ ಕುಡಿಯದಿದ್ದರೆ ಸಾಕು, ತಿಂಗಳ ಖರ್ಚು ಹೇಗೋ ನಿಭಾಯಿಸಬಹುದೆಂದು ನಾನು ಲೆಕ್ಕ ಹಾಕಿದೆ.

ಮುಂದಿನ ಗುರುವಾರ ಮಧ್ಯಾಹ್ನ ಹನ್ನೆರಡುವರೆಗೆ ಪಯೋಟ್ ರೆಸ್ಟೋರೆಂಟಿನಲ್ಲಿ ಭೇಟಿಯಾಗುತ್ತೇನೆಂದು ನನ್ನ ಅಭಿಮಾನಿಗೆ ಪತ್ರ ಬರೆದು ಹಾಕಿದೆ.

ಆ ದಿನವೂ ಬಂದಿತು.

ಮೊದಲ ನೋಟಕ್ಕೆ ನನ್ನ ಅಭಿಮಾನಿ ನನ್ನಲ್ಲಿ ನಿರಾಸೆಯನ್ನೇ ಹುಟ್ಟಿಸಿದಳೆನ್ನಬಹುದು. ಮೊದಲನೆಯದಾಗಿ, ಆಕೆಯ ವಯಸ್ಸು ನಾನು ಊಹಿಸಿದಕ್ಕಿಂತ ಹೆಚ್ಚಾಗಿಯೇ ಇತ್ತು. ನಾನು ಕಲ್ಪಿಸಿಕೊಂಡಿದ್ದ ಮುಗ್ಧ, ಸುಂದರ, ಆಕರ್ಷಕ ತರುಣಿಯ ಜಾಗದಲ್ಲಿ, ಸಂಸಾರಿಕ ಜಂಜಾಟದಲ್ಲಿ ಪಳಗಿದ ಮಹಿಳೆಯನ್ನು ಕಂಡು ನನ್ನ ಉತ್ಸಾಹ ಜರ್ರನೆ ಇಳಿಯಿತು. ಆಕೆಗೆ ಸುಮಾರು ನಲವತ್ತು ವರ್ಷ ವಯಸ್ಸಾಗಿತ್ತು! ನಲವತ್ತು ವರ್ಷ ವಯಸ್ಸಿನ ಮಹಿಳೆ ಆಕರ್ಷಕವಾಗಿರುವುದಿಲ್ಲವೆಂದು ನನ್ನ ಅಭಿಮತವಲ್ಲ. ಆದರೂ, ಏಕೋ ನನಗೆ ಆಕೆಯ ಕುರಿತು ಯಾವುದೇ ರೋಮ್ಯಾಂಟಿಕ್ ಭಾವನೆಗಳು ಉದ್ದೀಪನಗೊಳ್ಳಲಿಲ್ಲ. ಏಕೆಂಬುದೇ ನನಗೆ ಅರ್ಥವಾಗಲಿಲ್ಲ. ಆಕೆಯ ಹಲ್ಲುಗಳು ಅಸ್ವಾಭಾವಿಕ ಎನಿಸುವಷ್ಟು ಬಿಳುಪಾಗಿದ್ದು ಒಂದೇ ಅಚ್ಚಿನಲ್ಲಿ ತಯಾರಾಗಿದ್ದಂತೆ ಕಾಣಿಸುತ್ತಿದ್ದವು.

ಆಕೆ ಮಹಾ ವಾಚಾಳಿ ಎಂಬುದು ಕೆಲವೇ ಕ್ಷಣಗಳಲ್ಲಿ ನನಗೆ ಮನದಟ್ಟಾಯಿತು. ಆಕೆ ನನ್ನ ಬಗ್ಗೆ, ನನ್ನ ಕಾದಂಬರಿಯ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುತ್ತಿದ್ದುದ್ದರಿಂದ ನನಗೆ ಅದೇನೂ ಅಪಥ್ಯವೆನಿಸಲಿಲ್ಲ! ನಾನು ಕಿವಿಗೊಟ್ಟು ಕೇಳಿಸಿಕೊಳ್ಳುತ್ತಿದ್ದೆ. ಅಷ್ಟರಲ್ಲಿ ವೇಯ್ಟರ್ ಬಂದು ಮೆನು ಕಾರ್ಡನ್ನು ತಂದಿಟ್ಟು ಹೋದ. ಕಾರ್ಡಿನ ಮೇಲೆ ದೃಷ್ಟಿ ಹಾಯಿಸುತ್ತಿದ್ದಂತೆ ನನ್ನ ಎದೆ ಡವಗುಟ್ಟತೊಡಗಿತು. ಅಲ್ಲಿಯ ಆಹಾರ ಪದಾರ್ಥಗಳ ದರ ನಾನು ಅಂದಾಜು ಮಾಡಿದ್ದಕ್ಕಿಂತ ಹೆಚ್ಚಾಗಿತ್ತು. ಆಕೆಗೆ ನನ್ನ ಆತಂಕದ ಅಂದಾಜಾಯಿತೇನೋ!

"ನನ್ನ ಲಂಚ್ ತುಂಬಾ ಸರಳ. ಏನೂ ಅಲ್ಲವೆಂದರೂ ಸರಿಯೇ!" ಆಕೆ ಎಂದಳು.

"ಛೆ, ಛೇ... ಹಾಗೆನ್ನಬೇಡಿ. ನನಗೆ ದುಃಖವಾಗುತ್ತದೆ." ನೋವಿನಿಂದ ನಾನೆಂದೆ.

"ನಾನು ಗಮನಿಸಿದಂತೆ ಇತ್ತೀಚೆಗೆ ಜನರು ಅಗತ್ಯಕ್ಕಿಂತ ಹೆಚ್ಚಾಗಿ ಉಣ್ಣುತ್ತಿದ್ದಾರೆ! ನನ್ನ ಬಗ್ಗೆ ಹೇಳುವುದಾದರೆ, ಲಂಚ್‌ಗೆ ಬರೀ ಮೀನು ಅಷ್ಟೇ! ಅದೂ ಕೂಡ ಇವರಲ್ಲಿ 'ಸಾಮಾನ್' (Salmon) ಮೀನು ಇದ್ದರೆ ಮಾತ್ರ!"

"ಈ ಋತುವಿನಲ್ಲಿ ಸಾಮಾನ್ ಮೀನು ಸಿಗುವುದು ದುಸ್ತರ." ನಾನೆಂದೆ.

"ನನಗೂ ಅದೇ ಸಂದೇಹವಿತ್ತು! ರೆಸ್ಟೋರೆಂಟಿಗೆ ಬರುತ್ತಿದ್ದಂತೆ ವೇಯ್ಟರನನ್ನು ಕೇಳಿದೆ. ಅದೃಷ್ಟವಶಾತ್ ಅವರಿಗೆ ಇಂದೇ ಸಾಮಾನ್ ಮೀನುಗಳು ಬಂದಿವೆಯಂತೆ!!"

ನನ್ನ ಅಭಿಮಾನಿ ದೇವಿಗೆ ಸಾಮಾನ್ ಮೀನನ್ನು ಆರ್ಡರ್ ಮಾಡದೇ ಬೇರೆ ದಾರಿ ಇರಲಿಲ್ಲ.